# Akashvani : Bangalore
# National Bulletin In Kannada
# 08.11.2024 / 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**08.11.2024 / 19.35 hrs**

**<><*<><>*><>**

<u>ಮುಖ್ಯಾಂಶಗಳು</u>

೧. ಕರ್ಮಯೋಗಿ ರಾಷ್ಟ್ರೀಯ ಕಲಿಕಾ ಸಪ್ತಾಹದಲ್ಲಿ ೪.೩ ಲಕ್ಷ ಸರ್ಕಾರಿ ಸಿಬ್ಬಂದಿ ಭಾಗಿ

೨. ವಿಧಾನಸಭೆ ಚುನಾವಣೆ: ಮಹಾರಾಷ್ಟ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ, ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಚಾರ

೩. ಹಬ್ಬಗಳ ಹಿನ್ನೆಲೆಯಲ್ಲಿ ಪ್ರಯಾಣಿಕರ ದಟ್ಟಣೆ: ೧೬೪ ವಿಶೇಷ ರೈಲುಗಳ ಸಂಚಾರ

೪. ಭಾರತೀಯ ಮಿಲಿಟರಿ ಪಾರಂಪರಿಕ ಉತ್ಸವದ ಎರಡನೇ ಆವೃತ್ತಿಗೆ ಚಾಲನೆ

೫. ಟಿ-೨೦ ಕ್ರಿಕೆಟ್: ಭಾರತ-ದಕ್ಷಿಣ ಆಫ್ರಿಕಾ ಮುಖಾಮುಖಿ

**<><*<><>*><>**

ರಾಷ್ಟ್ರೀಯ ಕಲಿಕಾ ಸಪ್ತಾಹದ ಉಪಕ್ರಮವಾದ ಕರ್ಮಯೋಗಿ ಸಪ್ತಾಹವು ೩೮ ಲಕ್ಷ ಗಂಟೆಗಳ ಪರಿವರ್ತಕ ಕಲಿಕೆಯ ಅಭಿಯಾನದ ಮೂಲಕ ಅಭೂತಪೂರ್ವ ಪರಿಣಾಮ ಸಾಧಿಸಿದೆ ಎಂದು ಕೇಂದ್ರ ಸರ್ಕಾರ ಇಂದು ಹೇಳಿದೆ. ಈ ಉಪಕ್ರಮವು ೪೫ ಲಕ್ಷಕ್ಕೂ ಹೆಚ್ಚು ಕೋರ್ಸ್ ದಾಖಲಾತಿಗಳನ್ನು ಕಂಡಿದೆ ಎಂದು ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದು-ಕೊರತೆಗಳು ಮತ್ತು ಪಿಂಚಣಿಗಳ ಸಚಿವಾಲಯ ತಿಳಿಸಿದೆ. ಈ ವರ್ಷ ಅಕ್ಟೋಬರ್ ೧೯ ರಿಂದ ೨೭ ರವರೆಗೆ ಆಚರಿಸಲಾದ ಕರ್ಮಯೋಗಿ ಸಪ್ತಾಹದಲ್ಲಿ ೪.೩ ಲಕ್ಷ ಸರ್ಕಾರಿ ಸಿಬ್ಬಂದಿ ಭಾಗವಹಿಸಿದ್ದು, ಕನಿಷ್ಠ ನಾಲ್ಕು ಗಂಟೆಗಳನ್ನು ಕಲಿಕೆಗೆ ಮೀಸಲಿಟ್ಟರು. ಸುಮಾರು ೩೭ ಸಾವಿರ ಗ್ರೂಪ್ 'ಎ' ಅಧಿಕಾರಿಗಳು ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳೊಂದಿಗೆ ವೃತ್ತಿಪರ ಅಭಿವೃದ್ಧಿಗೆ ಆದ್ಯತೆ ನೀಡಿದರು ಎಂದು ಸಚಿವಾಲಯ ಮಾಹಿತಿ ನೀಡಿದೆ.

**<><*<><>*><>**

ಕೇಂದ್ರ ಜಾಗೃತ ಆಯೋಗ-ಸಿವಿಸಿ ನವದೆಹಲಿಯಲ್ಲಿಂದು ಆಯೋಜಿಸಿರುವ ವಿಚಕ್ಷಣಾ ಜಾಗೃತಿ ಸಪ್ತಾಹದ ಕಾರ್ಯಕ್ರಮವನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ ಮಾಡಿದರು. ಭಾರತ ಸರ್ಕಾರ ಭ್ರಷ್ಟಾಚಾರ ನಿರ್ಮೂಲನೆ ಕುರಿತು ಹಲವು ಕಠಿಣ ಕ್ರಮಗಳನ್ನು ಕೈಗೊಂಡಿದೆ. ನೇರ ನಗದು ವರ್ಗಾವಣೆ, ಇ-ಟೆಂಡರಿಂಗ್, ಪಿಎಂಎಲ್‌ಎ ಕಾಯ್ದೆ ತಿದ್ದುಪಡಿ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಸರ್ಕಾರ ಭ್ರಷ್ಟಾಚಾರದ ವಿರುದ್ಧ ಶೂನ್ಯ ಸಹಿಷ್ಣತೆ ಹೊಂದಿದ್ದು, ಅದನ್ನು ಸಾಧಿಸುವ ವಿಶ್ವಾಸವಿದೆ ಎಂದರು. ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವಿಲ್ಲ ಎಂಬ

ನಿರಾಶವಾದ ಸರಿಯಲ್ಲ. ಏಕೆಂದರೆ, ಕಳೆದ ೧೦ ವರ್ಷಗಳಲ್ಲಿ ಸರ್ಕಾರ ಪಾರದರ್ಶಕತೆ ಹಾಗೂ ಉತ್ತರದಾಯಿತ್ವಕ್ಕೆ ಒತ್ತು ನೀಡಿ, ಆಡಳಿತದಲ್ಲಿ ಸಾಕಷ್ಟು ಸುಧಾರಣೆಗಳನ್ನು ಮಾಡಿದ್ದು, ಅವುಗಳ ಪರಿಣಾಮ ಆಡಳಿತದಲ್ಲಿ ದಕ್ಷತೆ ಹೆಚ್ಚಿದೆ ಎಂದು ರಾಷ್ಟ್ರಪತಿ ಹೇಳಿದರು. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದ ವಾರದಲ್ಲಿ ಸಿವಿಸಿಯಿಂದ ಪ್ರತಿ ವರ್ಷ ಜಾಗೃತಿ ಸಪ್ತಾಹವನ್ನು ಆಚರಿಸಲಾಗುತ್ತದೆ. ಈ ವರ್ಷ, ಅಕ್ಟೋಬರ್ ೨೮ ರಿಂದ ನವೆಂಬರ್ ೩ ರವರೆಗೆ ಜಾಗೃತಿ ಸಪ್ತಾಹವನ್ನು ಆಚರಿಸಲಾಯಿತು.

"ಸತ್ಯನಿಷ್ಠ ಸಂಸ್ಕೃತಿಯಿಂದ ರಾಷ್ಟ್ರಕ್ಕೆ ಸಮೃದ್ಧಿ"; "ರಾಷ್ಟ್ರದ ಅಭ್ಯುದಯಕ್ಕಾಗಿ ಸಮಗ್ರತೆಯ ಸಂಸ್ಕೃತಿ" ಎಂಬುದು ಈ ವರ್ಷದ ಘೋಷವಾಕ್ಯವಾಗಿದೆ. ಕಾರ್ಯಕ್ರಮದಲ್ಲಿ ಕೇಂದ್ರ ಜಾಗೃತ ಆಯೋಗವು ಸಿದ್ಧಪಡಿಸಿದ ಮೂರು ಕಿರುಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಜೊತೆಗೆ, ೨೦೨೪ರ ಸಪ್ತಾಹದ ಕುರಿತು ಅಂಚೆ ಇಲಾಖೆಯ ವಿಶೇಷ ಲಕೋಟೆಯನ್ನೂ ಸಹ ಬಿಡುಗಡೆಗೊಳಿಸಲಾಯಿತು.

<><*<><>*><>

ಕೇಂದ್ರದ ಎನ್‌ಡಿಎ ಸರ್ಕಾರ ಮತ್ತು ಮಹಾರಾಷ್ಟ್ರದಲ್ಲಿನ ಮಹಾಯುತಿ ಸರ್ಕಾರ ಹಿಂದುಳಿದವರ ಕಲ್ಯಾಣಕ್ಕೆ ಬದ್ಧವಾಗಿದೆ ಎಂದು ಬಿಜೆಪಿಯ ಹಿರಿಯ ನಾಯಕ ಮತ್ತು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಮಹಾರಾಷ್ಟ್ರದ ನಾಸಿಕ್‌ನಲ್ಲಿ ನಡೆದ ಪ್ರಚಾರ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಉಜ್ವಲ ಯೋಜನೆಯಡಿ ಮಹಾರಾಷ್ಟ್ರದ ೫೦ ಲಕ್ಷ ಮಹಿಳೆಯರು ಉಚಿತ ಎಲ್‌ಪಿಜಿ ಸಂಪರ್ಕವನ್ನು ಪಡೆದಿದ್ದಾರೆ ಮತ್ತು ಹರ್ ಘರ್ ಜಲ್ ಯೋಜನೆಯಡಿ ೧ ಕೋಟಿ ೨೫ ಲಕ್ಷಕ್ಕೂ ಹೆಚ್ಚು ಕುಟುಂಬಗಳು ಪೈಪ್‌ಲೈನ್ ನೀರಿನ ಸಂಪರ್ಕವನ್ನು ಪಡೆದಿವೆ ಎಂದರು. ಮಹಾರಾಷ್ಟ್ರದಲ್ಲಿ ೭ ಕೋಟಿಗೂ ಹೆಚ್ಚು ಹಿಂದುಳಿದವರು ಉಚಿತ ಪಡಿತರ ಪಡೆಯುತ್ತಿದ್ದು, ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ ೭ ಲಕ್ಷಕ್ಕೂ ಹೆಚ್ಚು ಪಕ್ಕಾ ಮನೆಗಳನ್ನು ನಿರ್ಮಿಸಲಾಗಿದೆ ಎಂದು ಅವರು ಹೇಳಿದರು.ಇದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಧುಲೆಯಲ್ಲಿ ನಡೆದ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದರು. ಸಾಂಗ್ಲಿ ಜಿಲ್ಲೆಯ ಶಿರಲಾದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಿದ್ದರು. ಇದೇ ವೇಳೆ ಐ.ಎನ್.ಡಿ.ಐ. ಮೈತ್ರಿಕೂಟದ ನಾಯಕರು ರಾಜ್ಯದ ವಿವಿಧೆಡೆ ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಮತಯಾಚಿಸಿದರು. ಮಹಾರಾಷ್ಟ್ರ ವಿಧಾನಸಭೆಗೆ ಇದೇ ೨೦ರಂದು ಮತದಾನ ನಡೆಯಲಿದ್ದು, ಇದೇ ೨೩ ರಂದು ಮತ ಎಣಿಕೆ ಕಾರ್ಯ ನಡೆಯಲಿದೆ.

<><*<><>*><>

ಜಾರ್ಖಂಡ್ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಎನ್‌ಡಿಎ ಮತ್ತು ಐ.ಎನ್.ಡಿ.ಐ. ಮೈತ್ರಿಕೂಟದ ನಾಯಕರು ಮತಯಾಚನೆಯಲ್ಲಿ ತೊಡಗಿದ್ದಾರೆ. ಸಿಮ್ಡೆಗಾದಲ್ಲಿ ನಡೆದ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ, ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಜಾತಿವಾರು ಗಣತಿ ನಡೆಸಲಾಗುವುದು ಹಾಗೂ ಮೀಸಲಾತಿ ಮೇಲಿನ ಶೇಖಡ ೫೦ರಷ್ಟು ಮಿತಿಯನ್ನು ತೆಗೆದುಹಾಕಲಾಗುವುದು ಎಂದು ಭರವಸೆ ನೀಡಿದರು.

೮೧ ವಿಧಾನಸಭಾ ಕ್ಷೇತ್ರಗಳ ಜಾರ್ಖಂಡ್ ವಿಧಾನಸಭೆಗೆ ಇದೇ ೧೩ ಮತ್ತು ೨೦ರಂದು ಎರಡು ಹಂತದಲ್ಲಿ ಮತದಾನ ನಡೆಯಲಿದೆ. ಇದೇ ೨೩ರಂದು ಮತ ಎಣಿಕೆ ಕಾರ್ಯ ನಡೆಯಲಿದೆ.

<><*<><>*><>

ಹಬ್ಬದ ಋತುವಿನಲ್ಲಿ ಭಾರತೀಯ ರೈಲ್ವೆ ೪ ಸಾವಿರದ ೫೨೧ ವಿಶೇಷ ರೈಲುಗಳ ಮೂಲಕ ಸುಮಾರು ೬೫ ಲಕ್ಷ ಪ್ರಯಾಣಿಕರ ಸುಗಮ ಪ್ರಯಾಣಕ್ಕೆ ನೆರವಾಗಿದೆ. ರೈಲ್ವೆ ಸಚಿವಾಲಯ ತಿಳಿಸಿರುವಂತೆ ಭಾರತೀಯ ರೈಲ್ವೆಯ ಮೂಲಕ ಅಕ್ಟೋಬರ್ ೧ ರಿಂದ ನವೆಂಬರ್ ೫ರವರೆಗೆ ಬಿಹಾರ, ಉತ್ತರ ಪ್ರದೇಶ ಹಾಗೂ ಜಾರ್ಖಂಡ್ ರಾಜ್ಯಗಳಿಂದ ಸುಮಾರು ೬ ಕೋಟಿ ೮೫ ಲಕ್ಷ ಪ್ರಯಾಣಿಕರು ಪ್ರಯಾಣ ಮಾಡಿದ್ದಾರೆ. ವಿಶೇಷ ರೈಲುಗಳ ಸುಗಮ ಸಂಚಾರ ಹಾಗೂ ಪ್ರಯಾಣಿಕರ ಸುರಕ್ಷತೆಗಾಗಿ ರೈಲ್ವೆ ರಕ್ಷಣಾ ಪಡೆ ಹಾಗೂ ಸ್ವಯಂ ಸೇವಕರನ್ನು ನಿಯೋಜಿಸಲಾಗಿದೆ. ಇನ್ನೊಂದೆಡೆ, ಛಟ್ ಪೂಜೆ ಸೇರಿದಂತೆ ನಾನಾ ಹಬ್ಬಗಳ ಹಿನ್ನೆಲೆಯಲ್ಲಿ ಪ್ರಯಾಣಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಭಾರತೀಯ ರೈಲ್ವೆ ಇಂದಿನಿಂದ ೧೬೪ ವಿಶೇಷ ರೈಲುಗಳ ಸಂಚಾರ ವ್ಯವಸ್ಥೆ ಕಲ್ಪಿಸಲಿದೆ. ಪ್ರಯಾಣಿಕರು ಹಬ್ಬದ ಆಚರಣೆ ನಂತರ ತಮ್ಮ ಊರುಗಳಿಗೆ ಹಿಂತಿರುಗಲು ಈ ರೈಲುಗಳು ಸಹಕಾರಿಯಾಗಲಿವೆ.

<><*<><>*><>

ಭಾರತೀಯ ಮಿಲಿಟರಿ ಪಾರಂಪರಿಕ ಉತ್ಸವದ ಎರಡನೇ ಆವೃತ್ತಿ ದೆಹಲಿಯಲ್ಲಿ ಇಂದಿನಿಂದ ಆರಂಭವಾಗಿದೆ. ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಅವರು ಉತ್ಸವವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮೂರು ಸೇನಾಪಡೆಗಳ ಮುಖ್ಯಸ್ಥರು ಭಾಗವಹಿಸಿದ್ದರು. ಇದೇ ವೇಳೆ, ಶೌರ್ಯಗಾಥಾ ಯೋಜನೆಗೆ ಚಾಲನೆ ನೀಡಲಾಯಿತು. ಈ ಯೋಜನೆಯಡಿ ಮಿಲಿಟರಿ ವ್ಯವಹಾರಗಳ ಇಲಾಖೆಯು ಭಾರತದ ಮಿಲಿಟರಿ ಪರಂಪರೆಯನ್ನು ಶಿಕ್ಷಣ ಮತ್ತು ಪ್ರವಾಸೋದ್ಯಮದ ಮೂಲಕ ಸಂರಕ್ಷಿಸುವ ಮತ್ತು ಉತ್ತೇಜಿಸುವ ಗುರಿಯನ್ನು ಹೊಂದಲಾಗಿದೆ. ಎರಡು ದಿನಗಳ ಈ ಉತ್ಸವದಲ್ಲಿ ಭಾರತದ ರಾಷ್ಟ್ರೀಯ ಭದ್ರತೆ, ವಿದೇಶಾಂಗ ನೀತಿ, ಮಿಲಿಟರಿ ಇತಿಹಾಸ ಹಾಗೂ ಮಿಲಿಟರಿ ಪರಂಪರೆ ಕುರಿತು ಚರ್ಚೆ ಹಾಗೂ ಸಂವಾದಗಳು ನಡೆಯಲಿವೆ.

<><*<><>*><>

ಆಸಿಯಾನ್ ರಾಷ್ಟ್ರಗಳಲ್ಲಿ ರಾಜಕೀಯ ಬಿಕ್ಕಟ್ಟು ಎದುರಾದಾಗ ಅವುಗಳನ್ನು ಸಾಮೂಹಿಕವಾಗಿ ಎದುರಿಸುವ ಅಗತ್ಯವಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಸಿಂಗಾಪುರದಲ್ಲಿಂದು ಆಸಿಯಾನ್-ಭಾರತ ಚಿಂತನಾಜಾಲದ ೮ನೇ ದುಂಡುಮೇಜಿನ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮ್ಯಾನ್ಮಾರ್ ದೇಶದ ಉದಾಹರಣೆ ನೀಡಿ, ಅಂತಹ ಪರಿಸ್ಥಿತಿಗಳು ಎದುರಾದಾಗ ಅವುಗಳನ್ನು ಸಮರ್ಥವಾಗಿ ಹತ್ತಿಕ್ಕಬೇಕಾಗಿದೆ ಎಂದರು. ಇದಕ್ಕೂ ಮುನ್ನ, ಉಪ ಪ್ರಧಾನಿ ಮತ್ತು ವ್ಯಾಪಾರ ಮತ್ತು ಕೈಗಾರಿಕಾ ಸಚಿವ ಗನ್ ಕಿಮ್ ಯೋಂಗ್ ಅವರನ್ನು ಭೇಟಿ ಮಾಡಿ ಸಮಾಲೋಚಿಸಿದರು. ಉಭಯ ನಾಯಕರು ಕೈಗಾರಿಕಾ ಪಾರ್ಕ್‌ಗಳು, ನಾವೀನ್ಯತೆ ಮತ್ತು ಸೆಮಿಕಂಡಕ್ಟರ್ ಸೇರಿದಂತೆ ಹಲವು ವಲಯಗಳಲ್ಲಿ ಸಮಕಾಲೀನ ಹಾಗೂ ದ್ವಿಪಕ್ಷೀಯ

ಪಾಲುದಾರಿಕೆ ಬಲಪಡಿಸುವ ನಿಟ್ಟಿನಲ್ಲಿ ಚರ್ಚೆ ನಡೆಸಿದರು. ಡಾ.ಎಸ್.ಜೈಶಂಕರ್ ಅವರು ಸಿಂಗಾಪುರದ ಅಧ್ಯಕ್ಷ ಥರ್ಮನ್ ಷಣ್ಮುಗರತ್ನಂ, ಪ್ರಧಾನಿ ಮತ್ತು ಹಣಕಾಸು ಸಚಿವ ಲಾರೆನ್ಸ್ ವಾಂಗ್, ರಕ್ಷಣಾ ಸಚಿವ ಡಾ. ಎನ್.ಜಿ.ಇಂಗ್ ಹೆನ್ ಮತ್ತು ವಿದೇಶಾಂಗ ಸಚಿವ ಡಾ. ವಿವಿಯನ್ ಬಾಲಕೃಷ್ಣನ್ ಅವರನ್ನು ಭೇಟಿ ಮಾಡುವ ಕಾರ್ಯಕ್ರಮ ನಿಗದಿಯಾಗಿದೆ. ಭಾರತ ಮತ್ತು ಸಿಂಗಾಪುರ ನಿಕಟ ದ್ವಿಪಕ್ಷೀಯ ಸಂಬಂಧವನ್ನು ಹೊಂದಿವೆ. ಸಿಂಗಾಪುರದಲ್ಲಿ ಶೇಕಡ ೯.೨ರಷ್ಟು ಭಾರತೀಯ ಸಮುದಾಯದ ಜನರಿದ್ದಾರೆ.

<><*<><>*><>

ವಿವಿಧ ಅಂಶಗಳಲ್ಲಿ ಸಂಪರ್ಕವು ಪ್ರವಾಸೋದ್ಯಮಕ್ಕೆ ಪೂರಕವಾಗಿದೆ ಮತ್ತು ಇದು ಡಿಜಿಟಲ್ ಸಂಪರ್ಕವನ್ನು ಒಳಗೊಂಡಿದೆ ಎಂದು ಶ್ರೀಲಂಕಾದಲ್ಲಿರುವ ಭಾರತದ ಹೈಕಮಿಷನರ್ ಸಂತೋಷ್ ಝಾ ಹೇಳಿದ್ದಾರೆ. ಕೊಲಂಬೊದಲ್ಲಿ ನಡೆದ ದಕ್ಷಿಣ ಏಷ್ಯಾ ಪ್ರವಾಸೋದ್ಯಮ ನಾಯಕತ್ವ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತ ಮತ್ತು ಶ್ರೀಲಂಕಾ ನಡುವಿನ ಪಾಲುದಾರಿಕೆಯ ಕೇಂದ್ರ ಅಂಶವೇ ಸಂಪರ್ಕ. ಭಾರತದ ಡಿಜಿಟಲ್ ಬೆಳವಣಿಗೆಯು ಅತ್ಯಂತ ಮಹತ್ವದ್ದಾಗಿದ್ದು, ಡಿಜಿಟಲ್ ಕ್ಷೇತ್ರದಲ್ಲಿ ಏಕೀಕರಣಗೊಳ್ಳಲು ಶ್ರೀಲಂಕಾ ಕೆಲಸ ಮಾಡಬೇಕಾಗಿದೆ ಎಂದರು. ಶ್ರೀಲಂಕಾ ಪ್ರವಾಸೋದ್ಯಮಕ್ಕೆ ಭಾರತವು ಅತಿದೊಡ್ಡ ಕೊಡುಗೆ ನೀಡುತ್ತಿದೆ. ಭಾರತ ಮತ್ತು ಶ್ರೀಲಂಕಾ ನಡುವೆ ಪ್ರತಿ ವಾರ ೨೫೦ಕ್ಕೂ ಹೆಚ್ಚು ವಿಮಾನಗಳು ಕಾರ್ಯನಿರ್ವಹಿಸುತ್ತವೆ ಎಂದು ಸಂತೋಷ್ ಝಾ ಹೇಳಿದರು.

<><*<><>*><>

ದಕ್ಷಿಣ ಆಫ್ರಿಕಾದ ಡರ್ಬನ್‌ನ ಕಿಂಗ್ಸ್‌ಡಂನಲ್ಲಿ ಇಂದು ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ೪ ಪಂದ್ಯಗಳ ಸರಣಿಯ ಮೊದಲ ಟಿ-೨೦ ಅಂತಾರಾಷ್ಟ್ರೀಯ ಪಂದ್ಯ ನಡೆಯಲಿದೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮:೩೦ಕ್ಕೆ ಆರಂಭವಾಗಲಿದೆ. ದಕ್ಷಿಣ ಆಫ್ರಿಕಾ ಪ್ರವಾಸವು ಭಾರತದ ಟಿ-೨೦ ನಾಯಕ ಸೂರ್ಯಕುಮಾರ್ ಯಾದವ್ ನೇತೃತ್ವದ ಯುವ ತಂಡಕ್ಕೆ ತಮ್ಮ ಆಟ ಪ್ರದರ್ಶಿಸಲು ಉತ್ತಮ ಅವಕಾಶವಾಗಿದೆ. ಪ್ರಸ್ತುತ ಐಸಿಸಿ ಪುರುಷರ ಟಿ೨೦ ತಂಡದ ಶ್ರೇಯಾಂಕದಲ್ಲಿ ಭಾರತ ತಂಡವು ಅಗ್ರಸ್ಥಾನದಲ್ಲಿದೆ ಮತ್ತು ದಕ್ಷಿಣ ಆಫ್ರಿಕಾ ಆರನೇ ಸ್ಥಾನದಲ್ಲಿದೆ. ಎರಡನೇ ಟಿ-೨೦ ಅಂತಾರಾಷ್ಟ್ರೀಯ ಪಂದ್ಯವು ಭಾನುವಾರ ಗೆಬೆರಾದ ಸೇಂಟ್ ಜಾರ್ಜ್ ಪಾರ್ಕ್‌ನಲ್ಲಿ ನಡೆಯಲಿದೆ. ಮೂರನೇ ಪಂದ್ಯ ಸೆಂಚುರಿಯನ್‌ನಲ್ಲಿ ನಡೆಯಲಿದ್ದು, ನಾಲ್ಕನೇ ಹಾಗೂ ಅಂತಿಮ ಪಂದ್ಯ ಮುಂದಿನ ವಾರ ಜೋಹಾನ್ಸ್‌ಬರ್ಗ್‌ನಲ್ಲಿ ನಡೆಯಲಿದೆ.

<><*<><>*><>

ಫ್ರಾನ್ಸ್‌ನ ಮಡ್ಜ್‌ನಲ್ಲಿ ನಡೆಯುತ್ತಿರುವ ಮೊಸ್ಸೆಲ್ಲೆ ಓಪನ್ ಟೆನಿಸ್ ಪಂದ್ಯಾವಳಿಯ ಸೆಮಿಫೈನಲ್ ಪಂದ್ಯದಲ್ಲಿ ಇಂದು ಭಾರತದ ಋತ್ವಿಕ್ ಚೌಧರಿ ಬೊಲ್ಲಿಪಲ್ಲಿ ಮತ್ತು ಪೋರ್ಚುಗೀಸ್‌ನ ಫ್ರಾನ್ಸಿಸ್ ಕೊ ಕ್ಯಾಬ್ರಲ್ ಜೋಡಿಯು ಫ್ರಾನ್ಸ್‌ನ ಪಿಯರೆ-ಹ್ಯೂಗ್ಸ್ ಹರ್ಬರ್ಟ್ ಮತ್ತು ಅಲ್ಬಾನೊ ಒಲಿವೆಟ್ಟಿ ಜೋಡಿಯನ್ನು ಎದುರಿಸಲಿದೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೧೧.೫೦ ಕ್ಕೆ

ಆರಂಭವಾಗಲಿದೆ.  ಇದಕ್ಕೂ ಮುನ್ನ ಋತ್ವಿಕ್-ಫ್ರಾನ್ಸಿಸ್ ಜೋಡಿಯು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮ್ಯಾಕ್ಸಿಕೋದ ಸ್ಯಾಂಟಿಯಾಗೊ ಮತ್ತು ಫ್ರಾನ್ಸ್‌ನ ಎಡ್ವರ್ಡ್ ರೋಜರ್-ವಾಸಲಿನ್ ಜೋಡಿಯನ್ನು ೭-೬, ೬-೪ ಸೆಟ್‌ಗಳಿಂದ ಪರಾಭವಗೊಳಿಸಿತು.

<><*<><>*><>

ಇಕ್‌ಸಾನ್‌ನಲ್ಲಿ ನಡೆಯುತ್ತಿರುವ ಕೊರಿಯಾ ಮಾಸ್ಟರ್ಸ್ ಬ್ಯಾಂಡ್ಮಿಟನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಕಿರಣ್ ಜಾರ್ಜ್ ಸೆಮಿಫೈನಲ್ ಪ್ರವೇಶಿಸಿದ್ದಾರೆ.  ಕ್ವಾರ್ಟರ್ ಫೈನಲ್‌ನಲ್ಲಿಂದು ಜಪಾನ್ ನ ತಕುಮಾ ಒಬಯಶಿ ಅವರನ್ನು ೨೧-೧೪, ೨೧-೧೬ ನೇರ ಸೆಟ್‌ಗಳಿಂದ ಮಣಿಸಿ ಮುಂದಿನ ಹಂತ ಪ್ರವೇಶಿಸಿದರು.

<><*<><>*><>

ಭಾರತದ ಉದಯೋನ್ಮುಖ ಚೆಸ್ ಆಟಗಾರ ಅರ್ಜುನ್ ಎರಿಗೈಸಿ ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್‌ನಲ್ಲಿ ಅಲೆಕ್ಸಿ ಸರನಾ ವಿರುದ್ಧ ಮೂರನೇ ಸುತ್ತಿನ ಗೆಲುವಿನ ನಂತರ ಫಿಡೆ ವಿಶ್ವ ಚೆಸ್ ಶ್ರೇಯಾಂಕದಲ್ಲಿ ೨ನೇ ಸ್ಥಾನಕ್ಕೇರುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ೨೧ ವರ್ಷದ ಅರ್ಜುನ್ ಎರಿಗೈಸಿ ಅವರ ಈ ಗೆಲುವು  ಶ್ರೇಯಾಂಕವನ್ನು ಹೆಚ್ಚಿಸಿದೆ. ಆದರೆ ಮಾಸ್ಟರ್ಸ್ ವಿಭಾಗದಲ್ಲಿ ಅವರು ಮೂರು ಸುತ್ತುಗಳ ತೀವ್ರ ಸ್ಪರ್ಧೆಯ ನಂತರ ಇರಾನಿನ ಗ್ರ್ಯಾಂಡ್‌ಮಾಸ್ಟರ್ ಅಮೀನ್ ತಬಾತಬಾಯ್ ಅವರೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ

<>*><>